# ಸಿಐಡಿ ಇನ್ಸ್‌ಪೆಕ್ಟರ್

■ ಜಿ.ವಿ. ಅರುಣ
ಕಲೆ: ಸಂತೋಷ್ ಸಸಿಹಿತ್ಲು

ಅಂದು ಆಫೀಸಿನಿಂದ ಮನೆಗೆ ವಾಪಸ್ ಬರುವಾಗ ಪಕ್ಕದ ಮನೆಯ ಮುಂದೆ ಅವನ ಸ್ಕೂಟರ್ ನಿಂತು ಹೋಯಿತು. 'ಓಹೋ, ಸ್ಪಾರ್ಕ್ ಪ್ಲಗ್ ಕ್ಲೀನ್ ಮಾಡಬೇಕೇನೋ' ಅಂದುಕೊಂಡು ಸ್ಕೂಟರನ್ನು ಹಾಗೆ ನೂಕಿ ಮನೆಯೊಳಗೆ ಇಟ್ಟ. ಬೆಳಗ್ಗೆ ಸ್ಕೂಟರ್ ತೊಳೆಯುವಾಗ ಸ್ಪಾರ್ಕ್ ಪ್ಲಗ್ಗನ್ನು ಕ್ಲೀನ್ ಮಾಡಿಬಿಡೋಣ ಅಂದುಕೊಂಡ.

ಬೆಳಿಗ್ಗೆ ಕಾಫಿ ಕುಡಿಯುವಾಗ ಅವತ್ತು ಆಫೀಸಿನಲ್ಲಿ ಟ್ರೈನಿಂಗ್ ಪ್ರೋಗ್ರಾಮ್ ಇರುವುದು ನೆನಪಾಯಿತು. 'ಅಮ್ಮ ಆಫೀಸಿಗೆ ಊಟ ಬೇಡ. ಅಲ್ಲೇ ಆಗುತ್ತೆ' ಎಂದು ಕೂಗಿ ಹೇಳಿದ. ಆಚೆ ಬಂದು ಸ್ಕೂಟರ್ ನೋಡಿದ ತಕ್ಷಣ 'ಅಯ್ಯೋ ರಿಪೇರಿ ಬೇರೆ ಮಾಡಬೇಕಾ' ಅನ್ನಿಸಿಬಿಟ್ಟಿತ್ತು. 'ಸರಿ, ಹೇಗಾದರೂ ಸ್ನಾನ ಆಗಿಹೋಗಿದೆ. ಸಂಜೆ ಬಂದು ರಿಪೇರಿ ಮಾಡೋಣ. ಇವತ್ತು ಬಸ್ಸಿನಲ್ಲೇ ಆಫೀಸಿಗೆ ಹೋಗೋಣ' ಎಂದುಕೊಂಡ.

ಮನೆಯ ಹತ್ತಿರದ ಬಸ್ ನಿಲ್ದಾಣಕ್ಕೆ ಬಂದಾಗ ಅಲ್ಲಿ ಆಗಲೇ ಸಲ್ವಾರ್ ಕಮೀಜ್ ಹಾಕಿಕೊಂಡಿದ್ದ ಒಬ್ಬ ಹುಡುಗಿ ಬಸ್ಸಿಗೆ ಕಾಯುತ್ತ ನಿಂತಿದ್ದಳು. ಇವನು ಹೋಗಿ ಅವಳ ಹಿಂದೆ ನಿಂತ. ಅವಳು ಹಿಂದೆ ತಿರುಗಿ ಇವನ ಕಡೆ ನೋಡಿದಳು. ತಕ್ಷಣವೇ ಅವಳ ಮುಖಚರ್ಯೆಯೇ ಬದಲಾಯಿತು. ಹೆದರಿದವಳಂತೆ ಆಗಾಗ ಹಿಂದೆ ತಿರುಗಿ ಅವನನ್ನು ನೋಡತೊಡಗಿದಳು. ಇವನಿಗೆ ಆತಂಕ ಪ್ರಾರಂಭವಾಯಿತು. ನಾನೇನಾದರೂ ಅವಳಿಗೆ ಬಹಳ ಹತ್ತಿರ ನಿಂತು ಬಿಟ್ಟಿದ್ದೆನೋ ಎನಿಸಿ ಒಂದು ಹೆಜ್ಜೆ ಹಿಂದೆ ಹೋದ. ಅಷ್ಟರಲ್ಲಿ ಮತ್ತೊಬ್ಬ ಹೆಂಗಸು ಬಂದಾಗ ಅವರಿಗೆ ತನ್ನ ಸ್ಥಾನ ಬಿಟ್ಟುಕೊಟ್ಟು ಅವರ ಹಿಂದೆ ನಿಂತುಕೊಂಡ.



ಬಸ್ ಒಳಗೆ ಮೂವರೂ ಹತ್ತಿದಾಗ ಆ ಹೆಂಗಸು ಖಾಲಿ ಇದ್ದ ಒಂದು ಜಾಗದಲ್ಲಿ ಕುಳಿತಳು. ಇವನು ಆ ಹುಡುಗಿಯ ಹಿಂದೆ ನಿಲ್ಲಬೇಕಾಯಿತು. ಅವಳು ಟಿಕೆಟ್ ಕೊಂಡ ಸ್ಥಳಕ್ಕೇ ಇವನೂ ಟಿಕೆಟ್ ಕೊಂಡಾಗ ಅವಳು ಮತ್ತೆ ಇವನತ್ತ ಹಿಂದೆ ತಿರುಗಿ ಸ್ವಲ್ಪ ಆತಂಕದಲ್ಲೇ ನೋಡಿದಳು. ಗಮ್ಯ ಸ್ಥಳದಲ್ಲಿ ಇಬ್ಬರೂ ಇಳಿದರು. ಅವಳು ಬೇಗ ಹೋಗಿ ಬಸ್ ನಿಲ್ದಾಣದಲಿದ್ದ ಬೆಂಚಿನ ಮೇಲೆ ಕುಳಿತುಬಿಟ್ಟಳು. ಇವನಿಗೆ ಆಶ್ಚರ್ಯವಾಯಿತು. ತನ್ನ ಆಫೀಸಿನ ಕಡೆಗೆ ಕಾಲು ಹಾಕಿದ. ಸ್ವಲ್ಪ ಮುಂದೆ ಹೋಗಿ ತಿರುಗಿ ನೋಡಿದರೆ ಆ ಹುಡುಗಿ ಬೆಂಚ್ ಮೇಲೆ ಕುಳಿತಿರಲಿಲ್ಲ. ಆ ಕಡೆಗೆ ಬೇಗ ಬೇಗ ನಡೆದು ಹೋಗುತ್ತಿದ್ದಳು. ಅವಳೂ ತಿರುಗಿ ನೋಡಿದಾಗ ಇವನು ತನ್ನ ವೇಗವನ್ನು ಹೆಚ್ಚು ಮಾಡಿಕೊಂಡು ತನ್ನ ಆಫೀಸ್ ತಲುಪಿದ.

ಆ ಸಲ್ವಾರ್ ಕಮೀಜ್ ಹುಡುಗಿಯ ಈ ವಿಚಿತ್ರ ವರ್ತನೆ ಅವನಿಗೆ ಆಶ್ಚರ್ಯವಾಗಿ ಕಾಣಿಸಿತ್ತು. ಟ್ರೈನಿಂಗ್ ಕಾರ್ಯಕ್ರಮದ ಮಧ್ಯೆ ಅದು ಮರೆತು ಹೋಗಿತ್ತು. ಆದರೆ ಸಂಜೆ ಮನೆಗೆ